ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಎಲ್ಲಾ ಕಡೆಯೂ ಸಮಿತಿಯಲ್ಲಿ ಮಾಡಿರುವ ಬಗ್ಗೆ ನ್ನ ಬಳಿ ಅಂಕಿ ಸಂಖ್ಯೆಯಿದೆ. ಮತ್ತೊಮ್ಮೆ ತಮ್ಮ ಕ್ಷೇತ್ರವನ್ನೊಳಗೊಂಡಂತೆ ಪರಿಶೀಲಿಸುತ್ತೇನೆ.

ಅಮೃತ ಮಹಲ್ ಕಾವಲ್ ಜಮೀನನ್ನು ಉದ್ದೇಶಿಸಿ ಯೋಜನೆಗೆ ಬಳಕೆ

18 (303) ಡಾ: ವಿಶ್ವನಾಥ್ ವೈ.ಸಿ. (ಕಡೂರು) ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

ಅ) ಕಡೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಅಮೃತ ಮಹಲ್ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಸಂಬಂಧಪಟ್ಟ ಇಲಾಖೆಯಿಂದ ಈ ಜಮೀನನ್ನು ಉದ್ದೇಶಿತ ಯೋಜನೆಗೆ ಉಪಯೋಗಿಸಿಕೊಳ್ಳಲಾಗುತ್ತಿದೆಯೇ: ಈ ಪ್ರದೇಶದ ಜಮೀನನ್ನು ಅಳತೆ ಮೂಲಕ ಗುರುತಿಸಿ ವಿಸ್ತೀರ್ಣವನ್ನು ಇಲಾಖೆಯವರು ನಿಗದಿಪಡಿಸಿಕೊಂಡಿರುತ್ತಾರೆಯೇ;

ಇ) ಇತ್ತೀಚಿನ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಈ ಪ್ರದೇಶವನ್ನು ಉಪಯೋಗಿಸಿ ಕೊಳ್ಳಲಾಗಿದೆಯೇ;

ಈ) ಈ ಪ್ರದೇಶಗಳ ಜಮೀನು ಒತ್ತುವರಿ ಆಗಿದೆಯೇ:

ಉ) ದೀರ್ಘಾವಧಿ ಕಾಲದಿಂದ ಒತ್ತುವರಿ ಮಾಡುತ್ತಿದ್ದಲ್ಲಿ, ಸಕ್ರಮಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಊ) ಕಡೂರು ತಾಲ್ಲೂಕಿನ ಬಾಸೂರು ಕಾವಲು ಜಮೀನಿನನಲ್ಲಿ ವನ್ಯ ಜೀವಿಗಳು ಮತ್ತು ಪಕ್ಷಿಗಳ ಗಣತಿ ಕಾರ್ಯ ನಡೆಸಲಾಗಿದೆಯೇ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ವ್ಯಾಪ್ತಿಯಲ್ಲಿ 7 ಅಮೃತ್ ಮಹಲ್ ಕಾವಲುಗಳಿದ್ದು, ಅರ್.ಟಿ.ಸಿ. ರೀತ್ಯಾ ಅವುಗಳ ಒಟ್ಟು ಮಿಸ್ತೀರ್ಣ 10,308.36 ಎಕರೆಗಳಾಗಿರುತ್ತದೆ.

ಆ) ಹೌದು

ಕಂದಾಯ ಇಲಾಖೆಯವರ ಸಮೀಕ್ಷಾ ಕಾರ್ಯದಂತೆ ಅಳತೆ ಮಾಡಲಾಗಿದ್ದು. ಕಾವಲಿನ ವಿಸ್ತೀರ್ಣವನ್ನು ಗುರ್ತಿಸಲಾಗಿದೆ.

ಇ) ಹೌದು

ಈ) ಹೌದು

ಉ) ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಸಂಖ್ಯೆ: 17954/2001ರಂತೆ ಒತ್ತುವರಿದಾರರನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಊ) ಬಾಸೂರು ಅಮೃತ್ ಮಹಲ್ ಕಾವಲಿನಲ್ಲಿ ವನ್ಯ ಜೀವಿಗಳು ಮತ್ತು ಪಕ್ಷಿಗಳ ಗಣತಿ ಕಾರ್ಯವನ್ನು ನಡೆಸಲು ಅರಣ್ಯ ಇಲಾಖೆಗೆ ವಹಿಸಲಾಗಿದ್ದು. ವಲಯ ಅರಣ್ಯಾಧಿಕಾರಿಗಳು, ಕಡೂರು ಇವರು ಮೇಲ್ಕಂಡ ಗಣತಿ ಕಾರ್ಯ ನಡೆಸುತ್ತಿದ್ದು ಅದು ಇನ್ನೂ ಪೂರ್ಣಗೊಂಡಿರುವುದಿಲ್ಲ.

ಡಾ: ವಿಶ್ವನಾಥ್, ವೈ.ಸಿ. (ಕಡೂರು): ಸರ್ವೆ ಮಾಡಿದ್ದೇವೆಂದು ಹೇಳುತ್ತಾರೆ. ಅರಣ್ಯ ಇಲಾಖೆ, ಕಂದಾಯ ಇಲಾಖೆ ಮತ್ತು ಅಮೃತ ಮಹಲ್ ಕಾವಲ್ ಇಲಾಖೆಯವರುಗಳು individual ಆಗಿ ಸರ್ವೆ ಮಾಡಿದ್ದಾರೆ. Joint survey ಮಾಡಿಲ್ಲ. ಇಲಾಖೆಗಳವರು ಮಾಡಿರುವ ಸರ್ವೆಗಳಲ್ಲಿ ವ್ಯತ್ಯಾಸ ಕಂಡು ಬಂದಿವೆ. ನಮ್ಮ ಸಮಸ್ಯೆಯೇನೆಂದರೆ, ಬಹಳಷ್ಟು ರೈತರು ಸುಮಾರು 25–30 ವರ್ಷಗಳಿಂದ ಬಗರ್ ಹುಕುಂ ಜಮೀನನ್ನು ಮಾಡುತ್ತಿದ್ದಾರೆ. ನಮ್ಮ ಕಮಿಟಿ ಮುಂದೆ ಬಂದಿರುವ ಎಲ್ಲ ಅರ್ಜಿಗಳನ್ನು ವಜಾ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಅಧಿಕಾರಿಗಳು ಇದು ಕಂದಾಯ ಇಲಾಖೆಗೆ ಸೇರುತ್ತದೆ, ಇದು ಅಮೃತಮಹಲ್ ಕಾವಲ್‌ನವರಿಗೆ ಸೇರುತ್ತದೆ. ಅರಣ್ಯ ಇಲಾಖೆಗೆ ಸೇರುತ್ತದೆ ಎಂದು ಹೇಳುತ್ತಿರುವುದರಿಂದ, ಇವತ್ತು ಒಂದು ಎಕರೆಯನ್ನು ಕೂಡಾ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಕಾರಣ, ಈಗ joint survey ಮಾಡಿಸಿ, ಯಾವ ಇಲಾಖೆಗೆ ಸೇರಬೇಕು ಎನ್ನುವುದನ್ನು ಹದ್ದುಬಸ್ತು ಮಾಡಿಕೊಡಬೇಕು. ಜೊತೆಗೆ ಬಾಸೂರು ಕಾವಲ್‌ನಲ್ಲಿ ಸುಮಾರು ನೂರಾರು ವರ್ಷಗಳಿಂದ ಎರಡು–ಮೂರು ಕೆರೆ ಇದೆ. ಅಲ್ಲಿ wildlife ನವರು ಮತ್ತು ಪರಿಸರ ಇಲಾಖೆಯವರು ತಕರಾರು ತೆಗೆದು ಪಿ.ಎಂ.ಜಿ.ಎಸ್.ವೈ. ಯೋಜನೆಯ ರಸ್ತೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿ ಪ್ರಾಣಿಗಳು ಎಷ್ಟಿವೆ? ಅವರ objection ಏನೆಂದರೆ

ಅಲ್ಲಿ ಕೃಷ್ಣಮೃಗಗಳಿವೆ, ಜೊತೆಗೆ blackbuster ಹಕ್ಕಿ ಇದೆ. ಆದುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ರೈತರ ಚಟುವಟಿಕೆಗಳು ಬಿಡುತ್ತಿಲ್ಲ. ಅಲ್ಲಿ ಕೆರೆಗಳಲ್ಲಿ ಬಹಳ ವರ್ಷಗಳಿಂದ ರೈತರು ಮಣ್ಣು ತೆಗೆಯುತ್ತಿದ್ದರು. ದಯವಿಟ್ಟು ಇದರ ಸರ್ವೆ ಮಾಡಿಸಬೇಕಾಗಿದ್ದು, ಮಾಡಿಸಿಲ್ಲ.

ಶ್ರೀ ರೇವೂ ನಾಯಕ್ ಬೆಳಮಗಿ (ಪಶು ಸಂಗೋಪನೆ ಇಲಾಖಾ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೇಳಿದಂಥ ಸರ್ವೆ ಕಾರ್ಯ ಪೂರ್ಣಗೊಂಡಿದೆ. ಜಿಲ್ಲಾಧಿಕಾರಿಯವರ ಮುಖಾಂತರ ಪತ್ರ ಬರೆದು ಸರ್ವೆ ಕಾರ್ಯ ಮುಗಿಸಲಾಗಿದೆ. ಕಬ್ಜಾ ಮಾಡಿರುವ ಜಮೀನುಗಳ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇದನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ. ಏಕೆಂದರೆ, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಸಂಖ್ಯೆ: 1794/2001 ರಂತೆ ಒತ್ತುವರಿ ಆದ ಜಮೀನನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲವೆಂದು ತೀರ್ಪು ಕೊಟ್ಟಿದೆ. ಅದಕ್ಕೋಸ್ಕರ ಸಕ್ರಮಗೊಳಿಸಲು ಸಾಧ್ಯವಿಲ್ಲ. ಮಾನ್ಯ ಸದಸ್ಯರು ಬಾಸೂರು ಕಾವಲು ಕೆರೆಗಳ ಮತ್ತು ದಾರಿಗಳ ಬಗ್ಗೆ ಈಗ ಹೇಳಿದ್ದಾರೆ. ಅಲ್ಲಿ ಕಾನೂನು ಚೌಕಟ್ಟಿನೊಳಗೆ ಯಾವರೀತಿ ದಾರಿ ಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ನೋಡಿ ನಾನು ಡಿಸಿಯವರಿಗೆ ಒಂದು ಪತ್ರವನ್ನು ಬರೆದು ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಈ ರೀತಿ ಉತ್ತರವನ್ನು ಏಕೆ ಕೊಡುತ್ತಾರೋ ಗೊತ್ತಿಲ್ಲ. ಈಗ ಹೈಕೋರ್ಟಿನ ತೀರ್ಪಿನ ಪ್ರಕಾರ ಗೋಮಾಳ ಮಂಜೂರು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ನಿಮ್ಮ Land Revenue Act ನಲ್ಲಿ ಏನಿದೆ ಎಂದರೆ insufficient ಗೋಮಾಳವಾದರೆ ಕೊಡಬೇಡಿ ಎಂದು ಹೇಳಿದೆ. ಒಂದು ವೇಳೆ insufficient ಇದ್ದರೂ ಕೂಡ ಪಕ್ಕದಲ್ಲಿ forest ಇದ್ದರೆ ಕೊಡಬಹುದು ಎಂದು ಇದೆ.

ಅಧ್ಯಕ್ಷರು: ಇನ್ನೊಂದು ಅಂಶ ಹೇಳಿದ್ದಾರೆ, ಅದೇನೆಂದರೆ ಅಲ್ಲಿರುವಂತಹ ಒಟ್ಟು ಜಾನುವಾರುಗಳ ಸಂಖ್ಯೆ ಎಷ್ಟು ಎಂಬುದನ್ನು compare ಮಾಡಿ extra ಇದ್ದರೆ ಕೊಡಬಹುದು ಎಂದು ಇದೆ.

ಶ್ರೀ ಟಿ.ಬಿ. ಜಯಚಂದ್ರ: ಇವರು ಕೊಟ್ಟಿರುವಂತಹ order ನನ್ನ ಹತ್ತಿರ ಇದೆ. ಇದರ ಬಗ್ಗೆ ನಾನು raise ಮಾಡಬೇಕೆಂದು ಇದ್ದೇನೂ ನೀವೂ ಏಕಾಏಕಿ ಈ ರೀತಿ circular ಕೊಟ್ಟುಬಿಟ್ಟರೆ Actನಲ್ಲಿ ಒಂದು ರೀತಿ circularನಲ್ಲಿ ಒಂದು ರೀತಿಯಾದರೆ

ಏನಾಗುತ್ತದೆ? ಎರಡನೆಯದಾಗಿ ಒಂದು cattle ಎಂದರೆ ಇವರು ನೀಡಿರುವಂತಹ definition ಏನೆಂದರೆ ನೂರು ಕೋಳಿಯಿದ್ದರೆ ಒಂದು cattle ಎಂದು ಮಾಡಿದ್ದಾರೆ. ಇದು ಯಾವತ್ತು ಮಾಡಿದ ಕಾನೂನು? ನೀವು ಅದನ್ನೆಲ್ಲ ತೆಗೆದು review ಮಾಡಿ. ನೂರು ಕೋಳಿ ಎಲ್ಲದರೂ ಮೇಯುವುದಕ್ಕೆ ಹೋಗುತ್ತದೆಯೇ? ಅದಕ್ಕೆ ಒಂದು cattle. ನಾಲ್ಕು ಕರು ಇದ್ದರೆ ಒಂದು cattle ಎಂದು ಮಾಡಿದ್ದಾರೆ. ಏನಿದು? ಈ ಕೋಷ್ಟಕ ಇದೆಯಲ್ಲ. ದಯಮಾಡಿ ಇದನ್ನು revise ಮಾಡಿ. Unless you revise it, it becomes a big issue. ಇವತ್ತು land is a problem. ಇವತ್ತು ನನ್ನ ಕ್ಷೇತ್ರದಲ್ಲಿ ಸುಮಾರು ಒಂದೂವರೆ ಸಾವಿರ ಜನ ನಾಲ್ಕೂವರೆ ಸಾವಿರ ಎಕರೆ ಸಾಗು ಮಾಡುತ್ತಿದ್ದಾರೆ. withheld ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವತ್ತು ಅದು insufficient ಗೋಮಾಳವಾಗಿದೆಯೆನ್ನುವ ಒಂದೇ ಕಾರಣಕ್ಕೋಸ್ಕರ ಈ ರೀತಿ ಆಗಿದೆ. ಬಹುಶ: ನೀವು ಈ definition ಇಟ್ಟುಕೊಂಡರೆ ಅದೆಲ್ಲವೂ insufficient ಆಗುತ್ತದೆ. ದಯಮಾಡಿ ಆ definition ಇದೆಯಲ್ಲ, ಅದನ್ನು redefine ಮಾಡಿ. ನಾನು ಒಂದು ವಿಚಾರ ಹೇಳುವುದೇನೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಅಲ್ಲ. ದೇಶದಲ್ಲಿಯೇ ಕೋಲಾರದವರು ಅತ್ಯಂತ ಹೆಚ್ಚಿಗೆ ಹಾಲನ್ನು ಕೊಡುತ್ತಿದ್ದಾರೆ. ಅವರು ಯಾರೂ ಕೂಡ ದನಗಳನ್ನು ಹೊಲದಲ್ಲಿ ಹೋಗಿ ಮೇಯಿಸುತ್ತಿಲ್ಲ. ಅದಕ್ಕೆ ಪರ್ಯಾಯವಾಗಿ ಬೇರೆ ಬೇರೆ methodಗಳು ಬಂದಿವೆ. ಇವೆಲ್ಲ ಬಂದಿರುವಂತಹ ಹಿನ್ನೆಲೆಯಲ್ಲಿ ನೀವು ಓಬಿರಾಯನ ಕಾಲದ ಕಾನೂನುಗಳನ್ನು ಬದಲಾವಣೆ ಮಾಡಿಕೊಳ್ಳದಿದ್ದರೆ, ನೀವು ರೈತರಿಗೆ ಸಹಾಯ ಮಾಡುವುದಕ್ಕೆ ಆಗುತ್ತದೆಯೇ? ದಯಮಾಡಿ ತಾವು ಯೋಚನೆ ಮಾಡಿ. ಇದು ಲಂಬಾಣಿ ಜನಾಂಗವಾದ ಎಸ್‌ಟಿ ಮತ್ತು ಎಸ್‌ಸಿ ಜನಾಂಗಕ್ಕೆ ತೊಂದರೆಯಾಗತಕ್ಕಂಥಾದ್ದು ಇದೆ. ದಯಮಾಡಿ ತಾವು ಯೋಚನೆ ಮಾಡಿ ಇದನ್ನು ಮರುಪರಿಶೀಲನೆ ಮಾಡಿ. ಅಲ್ಲಿಯವರೆಗೂ ನ್ಯಾಯ ದೊರಕುವುದಕ್ಕೆ ಸಾಧ್ಯವಿಲ್ಲ.

ಶ್ರೀ ರೇವೂ ನಾಯಕ್ ಬೆಳಮಗಿ: ಮಾನ್ಯ ಹಿರಿಯ ಸದಸ್ಯರು ಏನು ಹೇಳಿದ್ದಾರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕುಣಿಗಲ್ ತಾಲ್ಲೂಕಿನಲ್ಲಿ ಪಶು ಆಸ್ಪತ್ರೆ ಸ್ಥಾಪನೆ

19 (128) ಶ್ರೀ ರಾಮಸ್ವಾಮಿ ಗೌಡ ಬಿ. ಬಿ. (ಕುಣಿಗಲ್):– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು